



ಕೊಡುತ್ತದೆ, ಇದಕ್ಕೆ ಕುಂದನ್, ಜರ್ದೋಸಿಯಂತಹ ವರ್ಕ್ ಇದ್ದರಂತೂ ರವಿಕೆಯ ಲುಕ್ ಇಮ್ಮಡಿ. ಹಬ್ಬಕ್ಕೆಂದೇ ಎಂಬ್ರಾಯಿಡರಿ ರವಿಕೆಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು, ಭಾರೀ ಬೇಡಿಕೆಯನ್ನೂ ಗಳಿಸುತ್ತಿದೆ' ಎನ್ನುತ್ತಾರೆ ಬೆಂಗಳೂರಿನಲ್ಲಿರುವ ಫ್ಯಾಷನ್ ತಜ್ಞೆ ಸುಜಾತಾ ಶೆಟ್ಟಿ.

'ಕಾಲೇಜು ಹೋಗುವ, ಉದ್ಯೋಗಕ್ಕೆ ತೆರಳುವ ಯುವತಿಯರಿಗಾಗಿ ಪಾಕೆಟ್ ಸೀರೆ, ಧೋತಿ ಸೀರೆ, ಬೆಲ್ಟ್ ಸೀರೆ, ಟ್ವಿಸ್ಟೆಡ್ ಪಲ್ಲು ಸೀರೆ, ಅಂಗ್ರಕಾ ಸೀರೆ, ಜೀನ್ಸ್ ಸೀರೆ, ಡಬಲ್ ಡ್ರೇಪ್ ಸೀರೆ, ಗೌನ್ ಸೀರೆ, ಪ್ಯಾಂಟ್ ಸ್ಟೈಲ್ ಸೀರೆ, ರ‍್ಯಾಪ್ ಸೀರೆ... ಮುಂತಾದ ಫ್ಯಾಷನಬಲ್ ಸೀರೆಗಳು ಬಂದಿದ್ದು ಹಬ್ಬಕ್ಕಾಗಿಯೇ ತಯಾರಾದ ಹಾಗಿವೆ' ಎಂದು ವಿವರ ನೀಡುತ್ತಾರೆ ಅವರು.

'ಹಬ್ಬದ ದಿನದಂದು ಉಡಲು ಸೀರೆಯ ಸಂಗ್ರಹ ಎಷ್ಟಿದ್ದರೂ ಸಾಲದು. ಸಂಭ್ರಮಕ್ಕೆ ಇಂಬು ಕೊಡುವ ಹಬ್ಬಗಳಿಗೆ ರೇಷ್ಮೆ ಸೀರೆಗಳಿದ್ದರೇ ಚೆನ್ನ ಎಂಬುದು ಮಹಿಳೆಯರ ಅನಿಸಿಕೆಯಾದರೆ ಇನ್ನು ಕೆಲವರಿಗೆ ರಂಗು ರಂಗಿನ ಫ್ಯಾನ್ಸಿ ಸೀರೆಗಳ ಮೇಲೆಯೇ ಒಲವು. ಹೀಗಾಗಿ ಲೈಟ್‌ವೈಟ್ ಸೀರೆ, ಹಗುರವಾದ ಸಣ್ಣ ಬಾರ್ಡರ್ ಇರುವ ಸೀರೆಗಳೂ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸುತ್ತಿವೆ' ಎನ್ನುವ ಅವರು, 'ಆಧುನಿಕ ಮನೋಭಾವದ ಮಹಿಳೆಯರ ಮನದಿಂಗಿತ ಅರಿತ ಸೀರೆ ವರ್ತಕರು, ಫ್ಯಾಷನ್ ಡಿಸೈನರ್‌ಗಳು ಹೊಸ ಮಾದರಿಯ, ನವನವೀನ ವಿನ್ಯಾಸದ ಸೀರೆಯನ್ನು ಪೂರೈಸುವತ್ತ ತಮ್ಮ ಚಿತ್ತ ಹರಿಸಿದ್ದಾರೆ' ಎಂದು ಹೇಳುತ್ತಾರೆ.

### ಕಾಟನ್ ಸಿಲ್ಕ್ ಸೀರೆ

ರೇಷ್ಮೆ ಸೀರೆಗಳಿಗೆ ಸೆಡ್ಡು ಹೊಡೆಯುವಂತಿರುವ ಕಾಟನ್ ಸಿಲ್ಕ್ ಸೀರೆಗಳು ಹಗುರವಾಗಿದ್ದು, ಗಾಢ ಬಣ್ಣಗಳಿಂದ ಗಮನಸೆಳೆಯುತ್ತಿವೆ. ಉಟ್ಟುಕೊಳ್ಳಲು ಆರಾಮದಾಯಕವೂ ಆಗಿರುವ ಇಂಥ ಸೀರೆಗಳ ನಿರ್ವಹಣೆಯೂ ಸುಲಭ. ವಿನ್ಯಾಸ, ಬಣ್ಣ ವೈವಿಧ್ಯದಲ್ಲಿ ಬೇರೆ ಯಾವ ಸೀರೆಗಳೊಂದಿಗೂ ಸರಿಸಾಟಿಯಾಗದಂತಿರುವ ಕಾಟನ್ ಸಿಲ್ಕ್ ಸೀರೆಗಳು ದುಬಾರಿಯೂ ಅಲ್ಲ.

ಹಬ್ಬದ ದಿನ ಬೆಳಿಗ್ಗೆಯಿಂದಲೂ ತಿಂಡಿತಿನಿಸು ತಯಾರಿಯಂತಹ ಕೆಲಸ, ಪೂಜೆ ನಿರ್ವಹಣೆಯಂತಹ ಕೆಲಸಗಳಿರುವಾಗ ಭಾರದ ರೇಷ್ಮೆ ಸೀರೆ ಉಡುವ ಬದಲಿಗೆ ಅದಕ್ಕಿಂತಲೂ ಸುಂದರ ಲುಕ್ ಕೊಡುವ ಕಾಟನ್ ಸಿಲ್ಕ್ ಸೀರೆಗಳು ಮಹಿಳೆಯರ ಮೆಚ್ಚು ಕೂಡ ಆಗಿದೆ. ಬೇರೆ ಬೇರೆ ಬಣ್ಣಗಳ ಸೀರೆಗಳನ್ನು ಖರೀದಿಸಿ ಇಟ್ಟುಕೊಂಡರೆ ಶ್ರಾವಣದ ಹಬ್ಬಗಳ ಜೊತೆಗೆ ನವರಾತ್ರಿ, ದೀಪಾವಳಿ ಹಬ್ಬಗಳಂದೂ ಉಟ್ಟುಕೊಳ್ಳಲು ಸೂಕ್ತ ಎನಿಸಿಕೊಳ್ಳುತ್ತವೆ.

## ಹಬ್ಬಕ್ಕೂ ಸಲ್ಲುವ ಎಥ್ನಿಕ್

ಸೀರೆಗಳಲ್ಲೂ ಎಥ್ನಿಕ್ ಸೀರೆ ಇಂದಿನ ಟ್ರೆಂಡ್. ಫ್ಯಾಷನಬಲ್ ಆಗಿರುವ ಬಹು ವರ್ಣದ ಸೀರೆಗಳು, ಒಂದೇ ಸೀರೆಯಲ್ಲಿ ಹಲವು ಬಣ್ಣಗಳಿಂದ ಕೂಡಿದವು ಇಂದಿನ ಫ್ಯಾಷನ್‌ಗೆ ತಕ್ಕಂತೆ ಧರಿಸಿದರೆ ಸಖತ್ ಲುಕ್ ಕೊಡುತ್ತದೆ. ಎಥ್ನಿಕ್ ಸೀರೆಗಳಿಗೆ ವಯೋಮಾನದ ಹಂಗಿಲ್ಲ. ಪುಟ್ಟ ಹುಡುಗಿಯಿಂದ ಹಿಡಿದು ಮುದುಕಿಯರವರೆಗೆ ಎಲ್ಲರೂ ಆರಾಮವಾಗಿ ಉಟ್ಟುಕೊಳ್ಳಬಹುದು. ಹೀಗಾಗಿ ಇಂಥ ಉಡುಪುಗಳಿಗೆ ಬೇಡಿಕೆಯೂ ಹೆಚ್ಚುತ್ತಿದೆ.

ಸಲ್ವಾರ್‌ಗಳಲ್ಲಿಯೂ ಅನೇಕ ವೈವಿಧ್ಯದ ಉಡುಪು ಬಂದಿವೆ. ಅದರಲ್ಲಿ ಆಧುನಿಕ ಮನೋಭಾವದ ಯುವತಿಯರ ಮನ ಸೆಳೆಯಲೆಂದೇ ಬಂದಿರುವ ಸಲ್ವಾರ್‌ಗಳು ಇಂದಿನ ಯುವತಿಯರ ಮೆಚ್ಚು ಕೂಡ ಆಗಿದೆ. ಎಥ್ನಿಕ್ ಉಡುಪುಗಳು ಸಾಂಪ್ರದಾಯಿಕತೆಯನ್ನು ಮೀರದೆ ಆಧುನಿಕ ಟ್ರೆಂಡ್‌ನೊಂದಿಗೆ ರಾಜಿ ಮಾಡಿಕೊಳ್ಳದೆ ಇಂದು ಯುವತಿಯರ ಮನಗೆಲ್ಲುತ್ತಿವೆ.

### ಫ್ಯಾಷನ್ ಜೊತೆಗೆ ಫ್ಯೂಷನ್ ರಂಗು!

ಫ್ಯೂಷನ್ ಸೀರೆಗಳು ಫ್ಯಾಷನ್ ಜಗತ್ತಿಗೆ ಎಂಟ್ರಿ ಕೊಟ್ಟಿರುವುದರಿಂದ ಮಹಿಳೆಯರಿಗೆ ಬಹು ಆಯ್ಕೆ ಸಿಕ್ಕಿದ ಹಾಗೆ ಆಗಿದೆ. ಇದರಲ್ಲಿ ತಿಳಿ ಬಣ್ಣಗಳು, ಗಾಢ ಬಣ್ಣ ಎರಡೂ ಶೈಲಿಯ ಸೀರೆಗಳಿದ್ದು ಸ್ಟೈಲಿಷ್ ಆಗಿ ಕಾಣಿಸಬೇಕೆನಿಸಿದವರಿಗೆ ಹೇಳಿ ಮಾಡಿಸಿದಂತಿದೆ. ಇದಕ್ಕೆ ಹೆಚ್ಚಿನ ಒಡವೆ ಹಾಕುವ ಅಗತ್ಯವೂ ಇಲ್ಲ. ಹಬ್ಬದ ನೆಪದಲ್ಲಿ ಖರೀದಿಸಿದ ಫ್ಯೂಷನ್ ಸೀರೆಗಳನ್ನು ಮದುವೆ ಮುಂಜಿಗಳಂತಹ ಶುಭ ಸಮಾರಂಭಗಳಲ್ಲೂ ಧರಿಸಬಹುದು. ಸದ್ಯ ಟ್ರೆಂಡ್‌ನಲ್ಲಿರುವ ಇಂಥ ಸೀರೆಗಳು ಶ್ರಾವಣದ ಸೊಬಗನ್ನು ಹೆಚ್ಚಿಸಲು ಕೂಡ ಸಹಕಾರಿ.

ಒಟ್ಟಿನಲ್ಲಿ ಶ್ರಾವಣ ಮಾಸ ಮಹಿಳೆಯರ ಮನಸ್ಸಿಗೆ ಬಹು ಹತ್ತಿರವಾದ ಮಾಸ. ಈ ಮಾಸದ ಚೆಲುವು, ಅನನ್ಯತೆಯಿಂದಾಗಿ ಹಬ್ಬದ ಸಡಗರ ಮಹಿಳೆಯರ ಮನದಲ್ಲಿ ಸದಾ ಹಸುರಾಗಿಯೇ ಇರುತ್ತದೆ. ಹಬ್ಬದ ನೆಪದಲ್ಲಿ ದೂರದೂರುಗಳಿಗೆ ಶಿಕ್ಷಣ, ಉದ್ಯೋಗ ನಿಮಿತ್ತ ಹೋದ ಮಕ್ಕಳು ಸಹ ಮನೆಯಲ್ಲಿ ಸೇರುವುದರಿಂದ ಈ ಸಮ್ಮಿಲನದಿಂದ ಭಾವನಾತ್ಮಕ ಸಂಬಂಧದ ಜೊತೆಗೆ ನೆನಪುಗಳ ನವೀಕರಣವೂ ಸಾಧ್ಯ. ■